**SC No. 258/2023**
**PW-25**

# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು.

**ಎಸ್. ಸಿ. 258/2023**

| | | |
|---|---|---|
| ಸಾಕ್ಷಿದಾರರ ಹೆಸರು | ಕಿರಣ್ ಅರ್ಜುನ್ ಹಂಪಿಹೊಳಿ | ಪ್ರಮಾಣ ವಚನ ಮಾಡಿದ ದಿನಾಂಕ: 04.03.2026 |
| ತಂದೆಯ/ಗಂಡನ ಹೆಸರು | ಅರ್ಜುನ್ | |
| ವಯಸ್ಸು | 33 ವರ್ಷ | |
| ವೃತ್ತಿ | ಉಪನೊಂದಣಾಧಿಕಾರಿ | ಪ್ರಾ.ಸಾಃ 25 |
| ವಾಸ ಸ್ಥಳ | ಸಿಂದಗಿ ತಾಲ್ಲೂಕು, ವಿಜಯಪುರ | ಚಾ.ಸಾಃ 33 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ನಾನು ಮೇಟಗಳ್ಳಿ ಪೊಲೀಸ್ ಠಾಣೆಯಲ್ಲಿ *2021* ರಿಂದ *2023* ರವರೆಗೆ ಕಾನೂನು ಮತ್ತು ಸುವ್ಯವಸ್ಥೆ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿದ್ದೆನು.

ದಿನಾಂಕ *24.05.2023* ರಂದು ಸಂಜೆ *7.00* ಗಂಟೆ ಸಮಯದಲ್ಲಿ ಪಿರ್ಯಾದುದಾರರಾದ ರಾಮೇಗೌಡ ಟಿ.ಎನ್. ಬಿನ್. ನಿಂಗೇಗೌಡರ ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿ ಠಾಣಾ ಮೊ.ಸಂಖ್ಯೆ *56/2023* ಕಲಂ *302* ಐಪಿಸಿ ರೀತ್ಯ ಪ್ರಕರಣವನ್ನು ದಾಖಲು ಮಾಡಿಕೊಂಡು ಪ್ರ.ವ.ವ ವರದಿ ಮತ್ತು ದೂರನ್ನು ನ್ಯಾಯಾಲಯಕ್ಕೆ ಠಾಣಾ *25* ಹೆಚ್.ಸಿ ನಂಜುಂಡೇಶ್ವರ್ ರವರ ಕೈಯಲ್ಲಿ ರಾತ್ರಿ *7.30* ಕೊಟ್ಟು ಕಳುಹಿಸಿದ್ದೆನು. ಸಾಕ್ಷಿದಾರರು ದೂರನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ. *1* ಎಂದು ಗುರುತಿಸಲ್ಪಟ್ಟಿದ್ದು, ಸಾಕ್ಷಿದಾರರ ಸಹಿಯನ್ನು **ನಿಪಿ.*1*** ***(ಬಿ)*** ಎಂದು ಗುರುತಿಸಲಾಯಿತು.

ಸಾಕ್ಷಿದಾರರು ಪ್ರ.ವ.ವ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು **ನಿಪಿ-*40*** ಎಂದು ಸಾಕ್ಷಿದಾರರ ಸಹಿಯನ್ನು **ನಿಪಿ-*40(ಎ)*** ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ** :

ಪಿರ್ಯಾದುದಾರರು ಠಾಣೆಗೆ ರಾತ್ರಿ 7.00 ಗಂಟೆಗೆ ಬಂದಿದ್ದರು. ಪಿರ್ಯಾದುದಾರರು ಠಾಣೆಗೆ ಬಂದಾಗ ಪಹರೆ ಕರ್ತವ್ಯದಲ್ಲಿ ಯಾರು ಇದ್ದರು ಎಂಬುದನ್ನು ನಾನು ಗಮನಿಸಿರುವುದಿಲ್ಲ. ಪಿರ್ಯಾದುದಾರರ ಜೊತೆಯಲ್ಲಿ ಆ ದಿನ ಯಾರು ಯಾರು ಬಂದಿದ್ದರು ಎನ್ನುವ ಬಗ್ಗೆ ಈಗ ನೆನಪಲ್ಲಿ ಇರುವುದಿಲ್ಲ. ನಾನು ಆ ದಿನ ಪಿರ್ಯಾದುದಾರರನ್ನು ಅರ್ಧ ಗಂಟೆ ವರೆಗೆ ವಿಚಾರಣೆ ಮಾಡಿದ್ದೆ. ಪಿರ್ಯಾದುದಾರರು ದೂರನ್ನು ಅವರೇ ಬರೆದುಕೊಂಡು ಬಂದಿದ್ದರು. ನಾನು ಪಿರ್ಯಾದುದಾರರಿಗೆ ಅನುಕೂಲಮಾಡುವ ಉದ್ದೇಶದಿಂದ ಸುಳ್ಳು ಪ್ರಕರಣವನ್ನು ದಾಖಲು ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರ.ವ.ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

**4 ನೇ ಅಪರ ಜಿಲ್ಲಾ ಮತ್ತು ಸತ್ರ**
**ನ್ಯಾಯಾಧೀಶರು, ಮೈಸೂರು.**